# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮಧು ಜಿ. ಮಾದೇಗೌಡ**

**(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 719**

**ಉತ್ತರಿಸಬೇಕಾದ ದಿನಾಂಕ : 19.09.2022**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 'ಯಶಸ್ವಿನಿ ಆರೋಗ್ಯ ಯೋಜನೆ' ಮರು ಜಾರಿ ಸಂಬಂಧ ಕೈಗೊಂಡಿರುವ ಸಿದ್ಧತೆಗಳೇನು ಹಾಗೂ ಎಂದಿನಿಂದ ಇದು ಜಾರಿಗೆ ಬರಲಿದೆ; | 2022-23 ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-67 ರಲ್ಲಿ ರೈತ ಬಾಂಧವರ ಬಹುದಿನಗಳ ಬೇಡಿಕೆ ಈಡೇರಿಸಲು ಯಶಸ್ವಿನಿ ಯೋಜನೆಯನ್ನು ಪರಿಷ್ಕರಿಸಿ ಮರುಜಾರಿಗೊಳಿಸಲು ನಿರ್ಧರಿಸಿ ಈ ಯೋಜನೆಯಿಂದ ಗ್ರಾಮೀಣ ಪ್ರದೇಶದ ರೈತ ಕುಟುಂಬಗಳಿಗೆ ಅತ್ಯುತ್ತಮ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಉದ್ದೇಶಕ್ಕಾಗಿ ರೂ.300 ಕೋಟಿಗಳನ್ನು ಒದಗಿಸಲಾಗುವುದೆಂದು ಘೋಷಿಸಲಾಗಿದೆ.<br><br>ಅದರಂತೆ ಸರ್ಕಾರದ ಆದೇಶ ಸಂಖ್ಯೆ: ಸಿಒ 154 ಸಿಎಲ್ಎಸ್ 2022, ಬೆಂಗಳೂರು, ದಿನಾಂಕ:30-03-2022 ರಲ್ಲಿ ಯೋಜನೆ ಅನುಷ್ಠಾನಗೊಳಿಸಲು ತಾತ್ವಿಕ ಅನುಮೋದನೆ ನೀಡಿ ಆದೇಶಿಸಿದೆ.<br><br>**ಯೋಜನೆ ಜಾರಿಗೊಳಿಸಲು ಈ ಕೆಳಕಂಡ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ.**<br><br>• ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಸಿದ್ಧಪಡಿಸಿ, ಆರ್ಥಿಕ ಇಲಾಖೆ ಸಹಮತಿಗೆ ಮಂಡಿಸಿದೆ.<br>• ಹೊಸದಾಗಿ ಯಶಸ್ವಿನಿ ಟ್ರಸ್ಟ್ ರಚನೆ ಮತ್ತು ಟ್ರಸ್ಟ್ ನೋಂದಣಿ ಮಾಡುವ ಕ್ರಮ ಪ್ರಗತಿಯಲ್ಲಿರುತ್ತದೆ.<br>• Third Party Agency(T.P.A) ನೇಮಕ ಹಾಗೂ ಡಾಟ ಎಂಟ್ರಿ ಟೆಂಡರ್ ಕರೆಯುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br>• ಯಶಸ್ವಿನಿ ಯೋಜನೆಯಡಿ ಸದಸ್ಯರಿಗೆ ಅಂತರ್‌ಜಾಲದಲ್ಲಿ ನೋಂದಣಿ ಮಾಡುವ ಮೂಲಕ ಆಧಾರ್ ಕಾರ್ಡ್‌ನೊಂದಿಗೆ ಪ್ರಧಾನ ಅರ್ಜಿದಾರರ ಯೂನಿಕ್ ಐಡಿ ಸಂಖ್ಯೆಯೊಂದಿಗೆ ಸ್ಮಾರ್ಟ್ ಕಾರ್ಡ್ ನೀಡಲು ಉದ್ದೇಶಿಸಿದ್ದು ಈ ಬಗ್ಗೆ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಸದರಿ ಸ್ಮಾರ್ಟ್ ಕಾರ್ಡ್‌ನ್ನು ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಹಾಗೂ ಟಿಪಿಎ ಸಂಸ್ಥೆಯಲ್ಲಿ ಉಪಯೋಗಿಸಿದಾಗ |

| | | |
|---|---|---|
| | | ಪ್ರಧಾನ ಅರ್ಜಿದಾರರು ಹಾಗೂ ಅವರ ಅವಲಂಬಿತರ ಸಂಪೂರ್ಣ ಮಾಹಿತಿ ಲಭ್ಯವಾಗುವ ರೀತಿಯಲ್ಲಿ ತಂತ್ರಜ್ಞಾನ ಬಳಸಿಕೊಳ್ಳಲಾಗುವುದು.<br>• ಪ್ರಾರಂಭಿಕವಾಗಿ ಆಯಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿರುವ 1650 ಚಿಕಿತ್ಸೆಗಳನ್ನು ಯಶಸ್ವಿನಿ ಯೋಜನೆಯಲ್ಲಿ ನೋಂದಾಯಿತವಾಗಿರುವ ಸಹಕಾರ ಸಂಘಗಳ ಸದಸ್ಯರಿಗೆ ಒದಗಿಸಲು ಉದ್ದೇಶಿಸಿದೆ.<br><br>ನೆಟ್‌ವರ್ಕ್ ಆಸ್ಪತ್ರೆಗಳ ನೋಂದಣಿ ಬಗ್ಗೆ ಟ್ರಸ್ಟ್ ನೋಂದಣಿಯಾದ ನಂತರ ವೆಬ್‌ಸೈಟ್‌ನಲ್ಲಿ ಪ್ರಕಟಣೆ ನೀಡಲಾಗುವುದು.<br><br>ಈ ಯೋಜನೆಯನ್ನು **ದಿನಾಂಕ:02-10-2022** ರಿಂದ ಜಾರಿಗೊಳಿಸಲು ಉದ್ದೇಶಿಸಲಾಗಿದೆ. |
| ಆ) | 'ಯಶಸ್ವಿನಿ ಆರೋಗ್ಯ ಯೋಜನೆ' ಯಡಿ ಯಾವ ಯಾವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದು; ಯಾವ ತರಹದ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ; | ಯಶಸ್ವಿನಿ ಯೋಜನೆಯಡಿ ಚಿಕಿತ್ಸೆ ನೀಡಲಿರುವ ಆಸ್ಪತ್ರೆಗಳನ್ನು ನೆಟ್‌ವರ್ಕ್‌ಗೆ ಸೇರಿಸುವ ಪ್ರಕ್ರಿಯೆ ನಡೆಯುತ್ತಿದೆ. ಯಶಸ್ವಿನಿ ಟ್ರಸ್ಟ್‌ನ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುವುದು. ಆ ಅರ್ಜಿಗಳನ್ನು ಪರಿಶೀಲನೆ ನಡೆಸಿ ಅರ್ಹ ಆಸ್ಪತ್ರೆಗಳನ್ನು ನೆಟ್‌ವರ್ಕ್‌ನಲ್ಲಿ ಸೇರ್ಪಡೆ ಮಾಡಲಾಗುವುದು.<br><br>ಆಯಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ ನೀಡಲಾಗುತ್ತಿರುವ ಎಲ್ಲಾ 1650 ಚಿಕಿತ್ಸೆಗಳನ್ನು ಸಹ ಈ ಪರಿಷ್ಕೃತ ಯೋಜನೆಯಡಿ ಒದಗಿಸುವುದು ಹಾಗೂ ಇನ್ನೂ ಹೆಚ್ಚಿನ ಚಿಕಿತ್ಸೆಗಳನ್ನು ಅಳವಡಿಸಲು ಕ್ರಮವಿಡಲಾಗುವುದು. |
| ಇ) | ಈಗಾಗಲೇ ಜಾರಿ ಯಲ್ಲಿರುವ ಆಯುಷ್ಮಾನ್ ಭಾರತ್-ಆಯುಷ್ಮಾನ್ ಆರೋಗ್ಯ ಕರ್ನಾಟಕ ಮರು ಜಾರಿಗೆ ತರಲು ಉದ್ದೇಶಿಸಿರುವ 'ಯಶಸ್ವಿನಿ ಆರೋಗ್ಯ ಯೋಜನೆ' ನಡುವಿನ ವ್ಯತ್ಯಾಸಗಳೇನು? | ಯಶಸ್ವಿನಿ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸುತ್ತಿದ್ದು, ತುಲನಾತ್ಮಕ ಹೋಲಿಕೆ ಸದ್ಯಕ್ಕೆ ಸಾಧ್ಯವಾಗುತ್ತಿಲ್ಲ. |

**ಸಂಖ್ಯೆ: ಸಿಒ 329 ಸಿಎಲ್ಎಸ್ 2022**

**(ಎಸ್.ಟಿ.ಸೋಮಶೇಖರ್)**
ಸಹಕಾರ ಸಚಿವರು